# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಹಾಯಕ ಕಾರ್ಯಪಾಲಕ ಅಭಿಯಂತರವರ ಕಛೇರಿ, ಪುಲಿಕೇಶಿನಗರ ಉಪವಿಭಾಗ, ರಾಬರ್ಟಸನ್ಸ್ ರಸ್ತೆ, ಫ್ರೇಜರ್ ಟೌನ್**

ಸ.ಕಾ.ನಿ.ಅ/ಪುನ/ಪಿಆರ್/ /2018-19 ದಿನಾಂಕ: 02. 02. 2019

**ದಿನಾಂಕ:- 02-02-2019 ರಂದು ವಾರ್ಡ್ ನಂ.61 ರ ವಾರ್ಡ್ ಸಮಿತಿಯ ಸಭೆಯ ನಡುವಳಿಗಳು:-**

**ಸಭೆಗೆ ಹಾಜರಿದ್ದವರು:-**

1. ಬಿ.ಬಿ.ಎಂ.ಪಿ ವಾರ್ಡ್ ಸಂಖ್ಯೆ:61 ರ ಮಾನ್ಯ ಸದಸ್ಯರು ಹಾಗೂ ವಾರ್ಡ್ ಸಮಿತಿ ಅಧ್ಯಕ್ಷರಾದ ಶ್ರೀ.ಮೊಹಮ್ಮದ್ ಜಮೀರ್ ಷಾ ರವರು.
2. ಸಹಾಯಕ ಅಭಿಯಂತರರು, ವಾರ್ಡ್ ನಂ.61 ಹಾಗೂ ವಾರ್ಡ್ ಸಮಿತಿ ಕಾರ್ಯದರ್ಶಿ ಶ್ರೀ.ರಂಗನಾಥ್.ಹೆಚ್.ಎಂ ವಾರ್ಡ್ ಸಮಿತಿಯ ಸಮಿತಿ ಸದಸ್ಯರು ಸಭೆಗೆ ಹಾಜರಿದ್ದರು.
3. ಸಹಾಯಕ ಕಂದಾಯ ಅಧಿಕಾರಿಗಳು (ಪುಲಿಕೇಶಿನಗರ) ರವರು.
4. ಸಹಾಯಕ ಕಾರ್ಯಪಾಲಕ ಅಭಿಯಂತರರು (ಪರಿಸರ) ವಿಭಾಗ.
5. ಸಹಾಯಕ ಕಾರ್ಯಪಾಲಕ ಅಭಿಯಂತರರು ಪುಲಿಕೇಶಿನಗರ ಉಪವಿಭಾಗ.
   ಸಹಾಯಕ ಕಾರ್ಯಪಾಲಕ ಅಭಿಯಂತರರು /ವಿದ್ಯುತ್ /ಸ್ಟ್ರೀಟ್ ಲೈಟ್/ ಕಂದಾಯ ಪರಿವೀಕ್ಷಕರು/ಕಂದಾಯ ವಸೂಲಿಗಾರರು/ಕಛೇರಿ ನೌಕರರು

ವಾರ್ಡ್ ಸಮಿತಿಯ ಸಭೆಯನ್ನು ಪ್ರಾರಂಭಗೊಳ್ಳುತ್ತಿದಂತೆ ಅಧ್ಯಕ್ಷರಾದ ಶ್ರೀ.ಮೊಹಮ್ಮದ್ ಜಮೀರ್ ಷಾ ರವರು ಪಾಲಿಕೆಯ ವಾರ್ಡ್ ಸದಸ್ಯರು ಮತ್ತು ಅಧಿಕಾರಿಗಳನ್ನು ಸ್ವಾಗತಿಸಿದರು.

1. ಹಿಂದೆ ನಡೆದ ಸಭೆಯಲ್ಲಿ ತಿಳಿಸಲಾಗಿದ ವಿಷಯಗಳ ಬಗ್ಗೆ ತೆಗೆದು ಕೊಂಡಿರುವ ಕ್ರಮಗಳ ಬಗ್ಗೆ ತಿಳಿಸಲು ಸೂಚಿಸಿರುತ್ತಾರೆ.
2. ಬೀದಿ ದೀಪಗಳು ಎಲ್.ಇ.ಡಿ ದೀಪಗಳ ರಿಪೇರಿಗಳ ಬಗ್ಗೆ ಚರ್ಚಿಸಿ ಸಂಬಂಧಪಟ್ಟ ವಿದ್ಯುತ್ ವಿಭಾಗದ ಅಭಿಯಂತರರು ಒಂದು ವಾರದೊಳಗೆ ಸರಿಪಡಿಸಲು ತಿಳಿಸಲಾಗಿರುತ್ತದೆ.
3. ಮದೀನ ಮೊಹಲ್ಲಾದಲ್ಲಿ ಡೆಬ್ರೀಸ್ ತೆರವುಗೊಳಿಸಲು ತಿಳಿಸಲಾಗಿರುತ್ತದೆ.
4. ಮೋದಿ ರಸ್ತೆಯ 8ನೇ ಅಡ್ಡರಸ್ತೆ ಮತ್ತು 9ನೇ ಅಡ್ಡರಸ್ತೆಯಲ್ಲಿ ಮತ್ತು ಎ.ಕೆ.ಕಾಲೋನಿಯಲ್ಲಿ ಡೆಬ್ರೀಸ್ ತೆರವುಗೊಳಿಸಲು ತಿಳಿಸಲಾಗಿರುತ್ತದೆ.
5. ಬಂಗಾರಗಿರಿನಗರದ ಎಡಭಾಗದ ಪ್ರದೇಶದಲ್ಲಿ ಈ ಕೆಳಕಂಡ ನ್ಯೂನ್ಯತೆಗಳನ್ನು ಸರಿಪಡಿಸಲು ಹಾಗೂ ಕ್ರಮವಹಿಸಲು ಶ್ರೀ.ಸಾತು ರವರು ಕಮಿಟಿ ಸಭೆಯಲ್ಲಿ ತಿಳಿಸಿರುತ್ತಾರೆ.
   ಎ. ಸ್ಯಾನಿಟರಿ ಲೈನ್ ಅಳವಡಿಸುವುದು.
   ಬಿ. ಚರಂಡಿಗಳನ್ನು ಸ್ವಚ್ಛಗೊಳಿಸುವುದು.
   ಸಿ. ರಸ್ತೆಯಲ್ಲಿರುವ ಕಸವನ್ನು ತೆರವುಗೊಳಿಸುವುದು.
   ಡಿ. ಹಾಳಾಗಿರುವು ವಿದ್ಯುತ್ ಕಂಬಗಳನ್ನು ತೆರವುಗೊಳಿಸಿ ಹೊಸ ಕಂಬಗಳನ್ನು ಅಳವಡಿಸುವುದು.
   ಇ. ಸಿ.ಸಿ.ಟಿ.ವಿ ಕ್ಯಾಮರಗಳನ್ನು ಅಳವಡಿಸುವುದು
6. ಬೋರ್ ಬ್ಯಾಂಕ್ ರಸ್ತೆಯಲ್ಲಿರುವ ಮಳೆನೀರು ಚರಂಡಿಯ Under Pass Bridge ಹತ್ತಿರ ಲೈಟ್ಸ್ ಮತ್ತು ಸಿ.ಸಿ.ಟಿ.ವಿ.ಕ್ಯಾಮರ ಅಳವಡಿಸಲು ಶ್ರೀಮತಿ.ಲೀನಾ ರವರು ಮನವಿ ಮಾಡಿರುತ್ತಾರೆ.

Scanned by CamScanner

7. ವಾರ್ಡ್ ವ್ಯಾಪ್ತಿಯಲ್ಲಿ ಸಿ.ಸಿ.ಟಿ.ವಿ ಅಳವಡಿಸುವ ಬಗ್ಗೆ ಕ್ರಮ ಕೈಗೊಳ್ಳಲು ಕಮಿಟಿ ಸದಸ್ಯರು ತಿಳಿಸಿರುತ್ತಾರೆ.
8. ಶ್ರೀ.ವಿ.ಪಿ.ಹರಿ ರವರು ಸಭೆಯಲ್ಲಿ ಈ ಕೆಳಕಂಡ ದೂರುಗಳ ಬಗ್ಗೆ ತಿಳಿಸಿರುತ್ತಾರೆ.
    1. ವಾರ್ಡ್ ನಂ.61 ರ ಮುಖ್ಯರಸ್ತೆ ಮತ್ತು ಅಡ್ಡರಸ್ತೆಗಳ ಸ್ವಚ್ಛತ ಕೆಲಸಗಳನ್ನು ನಿಯಮಿತವಾಗಿ ನಿರ್ವಹಿಸಲು ತಿಳಿಸಿರುತ್ತಾರೆ.
    2. ಚರಂಡಿಗಳಲ್ಲಿ ನೀರು ತುಂಬಿ ರಸ್ತೆಯ ಮೇಲೆ ಹರಿಯದಂತೆ ಚರಂಡಿಗಳನ್ನು ಸ್ವಚ್ಛಗೊಳಿಸಲು ತಿಳಿಸಿರುತ್ತಾರೆ.
    3. ಡೆಬ್ರೀಸ್ ಹಾಕುವ ಸ್ಥಳಗಳನ್ನು ಸ್ವಚ್ಚಗೊಳಿಸಿ ಡೆಬ್ರೀಸ್ ಹಾಕದಂತೆ ಕ್ರಮವಹಿಸಲು ತಿಳಿಸಿರುತ್ತಾರೆ.
    4. ಎಸ್.ಕೆ.ಗಾರ್ಡನ್ 2ನೇ ಮುಖ್ಯರಸ್ತೆಯ ಹತ್ತಿರ ಯು.ಜಿ.ಡಿ. ಮ್ಯಾನ್‌ಹೋಲ್ ತುಂಬಿ ನೀರು ರಸ್ತೆ ಮೇಲೆ ಹರಿಯುವುದನಗನು ಸರಿಪಡಿಸಲು ತಿಳಿಸಿರುತ್ತಾರೆ.
    5. ಎನ್.ಸಿ.ಕಾಲೋನಿಯ ಸಣ್ಣ ಗಲ್ಲಿ ರಸ್ತೆಗಳನ್ನು ದಿನನಿತ್ಯ ಸ್ವಚ್ಛಗೊಳಿಸಲು ತಿಳಿಸಿರುತ್ತಾರೆ.
    6. ಮಾತಮ್ಮ ದೇವಸ್ಥಾನ ಹತ್ತಿರ ಇರುವ ಹಾಳಾದ ವಿದ್ಯುತ್ ಕಂಬವನ್ನು ಬದಲಾಯಿಸಲು ತಿಳಿಸಿರುತ್ತಾರೆ.
9. ಸಿ ಸ್ಟ್ರೀಟ್ ಬ್ಯಾಡರಹಳ್ಳಿಯಲ್ಲಿ ಚೆಂಬರ್ ನೀರು ಮನೆ ಮುಂದೆ ಹರಿಯುತ್ತಿರುವುದರ ಬಗ್ಗೆ ಶ್ರೀಹ್ಯಾರಿ ಸಂಗಾಯನಾತನ್ ರವರು ಸಭೆಯಲ್ಲಿ ತಿಳಿಸಿರುತ್ತಾರೆ.
10. ಕಮಿಟಿಯ ಎಲ್ಲಾ ಸದಸ್ಯರು ತಮ್ಮ ತಮ್ಮ ಏರಿಯಾದಲ್ಲಿ ತಪಾಸಣೆ ನಡೆಸಿ ಉಳಿದ ಕೆಲಸ ಕಾರ್ಯಗಳ ಬಗ್ಗೆ ಮಾಹಿತಿ ನೀಡಲು ತಿಳಿಸಿದರು.

ನಂತರ ಮುಂದಿನ ಸಭೆಯೊಳಗೆ ಈ ಎಲ್ಲಾ ಕೆಲಸ ಕಾರ್ಯಗಳ ಬಗ್ಗೆ ಪಟ್ಟಿ ನೀಡಬೇಕೆಂದು ಎಲ್ಲಾ ಸದಸ್ಯರಿಗೆ ತಿಳಿಸಿ ಎಲ್ಲಾ ಕೆಲಸ ಕಾರ್ಯಗಳನ್ನು ಆಧ್ಯತೆ ನೀಡಿ ಮುಕ್ತಾಯಗೊಳಿಸಲು ಸೂಚಿಸುತ್ತಾ, ಮುಂದಿನ ಸಭೆಯನ್ನು ದಿನಾಂಕ: 02–02–2019 ರಂದು ನಿಗಧಿಪಡಿಸಿ, ಎಲ್ಲರಿಗೂ ವಂದಿಸಿ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಅಧ್ಯಕ್ಷರು

ಕಾರ್ಯದರ್ಶಿ
W. No. 61

ಪ್ರತಿಯನ್ನು:

1. ಪೂಜ್ಯ ಮಹಾಪೌರರು, ಬಿಬಿಎಂಪಿ ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
2. ಪೂಜ್ಯ ಉಪ ಮಹಾಪೌರರು, ಬಿಬಿಎಂಪಿ ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
3. ಮಾನ್ಯ ಆಯುಕ್ತರು, ಬಿಬಿಎಂಪಿ ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
4. ಕಾರ್ಯದರ್ಶಿಗಳು, ಕೌನ್ಸಿಲ್ ಕಾರ್ಯಾಲಯ ರವರ ಅವಗಾಹನೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
5. ವಾರ್ಡ್ ಸಮಿತಿಯ ಸದಸ್ಯರು, ಬಿಬಿಎಂಪಿ ರವರ ಅವಗಾಹನೆಗಾಗಿ ಕಳುಹಿಸಿದೆ.
6. ಜಂಟಿ/ಅಪರ ಆಯುಕ್ತರು (ಪೂರ್ವ) ಬಿಬಿಎಂಪಿ ರವರ ಅವಗಾಹನೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
7. ಉಪ ಆಯುಕ್ತರು (ಪೂರ್ವ) ಬಿಬಿಎಂಪಿ ರವರ ಅವಗಾಹನೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
8. ಕಾರ್ಯಪಾಲಕ ಅಭಿಯಂತರರು (ಪುಲಿಕೇಶಿನಗರ) ವಿಭಾಗ ರವರ ಅವಗಾಹನೆಗಾಗಿ ಕಳುಹಿಸಿದೆ.
9. ಸಹಾಯಕ ಕಾರ್ಯಪಾಲಕ ಅಭಿಯಂತರರು (ವಿದ್ಯುತ್ / ಪುಲಿಕೇಶಿನಗರ) ರವರ ಅವಗಾಹನೆಗಾಗಿ ಕಳುಹಿಸಿದೆ.

Scanned by CamScanner